ಪಿ.ಡಬ್ಲು-3 ದಯಾನಂದ ತಂದೆ ದತ್ತಾತ್ರೇಯ ಖಟಾರೆ ಸಾ. ಆಳಂದ.

ಸಾಕ್ಷಿಯನ್ನು ಇಂದು ದಿನಾಂಕಃ 14.07.2025 ರಂದು ಕರೆಯಿಸಿ ಪ್ರಮಾಣಿಕರಿಸಲಾಯಿತು

ಪಾಟೀ ಸವಾಲುಃ ಪ್ರತಿವಾದಿ ಪರಃ ಶ್ರೀ. ಪಿ.ಎನ್.ಎಸ್ ವಕೀಲರಿಂದ:-

ವಾದಿ ಮತ್ತು ಪ್ರತಿವಾದಿಯರು ನಮ್ಮ ಜನಾಂಗದವರು ಅಲ್ಲ ಎಂದರೆ ಸರಿ. ಆಳಂದದಲ್ಲಿ ನಮಗೆ ವೈಯಕ್ತಿಕವಾಗಿ ಸ್ವಂತ ಭೂಮಿ ಇಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ನಾನು ಹೇಳಿ ಬರೆಸಿರುವುದಿಲ್ಲ. ವಾದಿ ಮತ್ತು ಪ್ರತಿವಾದಿಯ ವಿಲಾಸಮತಿ ಮತ್ತು ಅವರ ಮಕ್ಕಳ ಮಧ್ಯೆ ವಿಭಜನೆ ಆದ ನಂತರ ಪ್ರತಿವಾದಿ ಮತ್ತು ವಿಲಾಸಮತಿ ಅವರ ಮಕ್ಕಳು ಅವರ ಆಸ್ತಿಯನ್ನು ಪ್ರತಿವಾದಿ ನಂ. 10 ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ವಾದಿಯ ಹಿಸ್ಸೆಗೆ 31 ಗುಂಟೆ ಆಸ್ತಿ ಬಂದಿರುತ್ತದೆ. 10 ನೇ ಪ್ರತಿವಾದಿಯರು ಅವರು ತಮ್ಮ ಜಮೀನಿಗೆ ಹೋಗಬೇಕಾದರೆ ಸದರಿ 31 ಗುಂಟೆ ಆಸ್ತಿಯಲ್ಲಿ ಹಾದು ಹೋಗಬೇಕು ಎಂದರೆ ಸರಿ.

2. ನಾನು ನ್ಯಾಯಾಲಯಕ್ಕೆ ವಾದಿಯು ಅವರ ಪಾಲಿಗೆ ಬಂದ ಆಸ್ತಿಯಲ್ಲಿ 24 ಫೀಟ್ ಅಗಲ ಮತ್ತು 200 ಫೀಟಕ್ಕಿಂತ ಹೆಚ್ಚಿಗೆ ಉದ್ದದ ಆಸ್ತಿಯು ಉಪಯೋಗಕ್ಕೆ ಬಾರದ ಕಾರಣ ನನಗೆ ಬಂದ ಆಸ್ತಿಯು ಸಮದಾನಕರವಾಗಿಲ್ಲ ಅಂತಾ ಸಾಕ್ಷಿ ಹೇಳಲು ಬಂದಿರುತ್ತೇನೆ. ಆಸ್ತಿ ವಿಭಜನೆ ಆಗಿ ಸುಮಾರು 11 ವರ್ಷಗಳು ಆಗಿರುತ್ತವೆ. 10 ನೇ ಪ್ರತಿವಾದಿಗೆ ಮಾರಾಟ ಮಾಡುವ ಸಮಯದಲ್ಲಿ ವಾದಿ ತಕರಾರು ಮಾಡಿಲ್ಲ ಎಂದರೆ ಸರಿ. 31 ಗುಂಟೆ ಆಸ್ತಿಯು ಈಗ ವಾದಿಯ ಕಬ್ಜೆಯಲ್ಲಿ ಇದೇಯೋ ಅಥವಾ ಪ್ರತಿವಾದಿ ನಂ. 10 ರವರ ಕಬ್ಜೆಯಲ್ಲಿ ಇದೇಯೋ ಎಂದರೆ ಸಾಕ್ಷಿಯು ಅದು ವಾದಿಯ ಕಬ್ಜೆಯಲ್ಲಿ ಇದ್ದು ಅವರು ಅಲ್ಲಿ ಸಾಗುವಳಿ ಮಾಡಿರುವುದಿಲ್ಲ. ನನಗೆ ಈ ದಾವೆಯ ಬಗ್ಗೆ ಖುದ್ದಾಗಿ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹಿತ ವಾದಿ ಮಾತುಕೇಳಿಕೊಂಡು ಬಂದು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲಾಃ**

ಓ.ಹೇ.ಕೆ.ಸರಿ.ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಆಳಂದ.